## ಸುದ್ದಿಸಂಚಯ

### ವಿವೇಕಾನಂದ ಸ್ಮಾರಕ ಭವನದ ಕನಸು ನನಸು - ಮುಖ್ಯಮಂತ್ರಿಗಳಿಂದ ಸಹಾಯ ನಿಧಿ ಬಿಡುಗಡೆ

**ವಿ**ಶ್ವವಿಖ್ಯಾತ ಸ್ವಾಮಿ ವಿವೇಕಾನಂದರು ಅಜ್ಞಾತ ಸಂನ್ಯಾಸಿಯಾಗಿ ೧೮೯೨ ರಲ್ಲಿ ಮೈಸೂರಿಗೆ ಭೇಟಿಕೊಟ್ಟಿದ್ದರು. ಅವರ ಅಪಾರ ವಿದ್ವತ್ತು ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವಗಳು ಅಂದಿನ ಮಹಾರಾಜರಾಗಿದ್ದ ಚಾಮರಾಜ ಒಡೆಯರನ್ನು ಆಕರ್ಷಿಸಿತ್ತು. ಅವರು ಸ್ವಾಮೀಜಿಯವರಿಗೆ ಅಧಿಕೃತ ಅತಿಥಿಯ ಸ್ಥಾನಮಾನವನ್ನು ನೀಡಿದ್ದರು. ತಾವು ತಂಗಿದ್ದ ಸಮಯದಲ್ಲಿ (ನವೆಂಬರ್ ೯–೨೪, ೧೮೯೨) ಸ್ವಾಮಿ ವಿವೇಕಾನಂದರು, ಇಲ್ಲಿನ ಪ್ರಸಿದ್ಧ ವಿದ್ವಾಂಸರೊಡನೆ ಮತ್ತು ಗಣ್ಯವ್ಯಕ್ತಿಗಳೊಡನೆ ಭಾರತದ ಭವಿತವ್ಯದ ಬಗ್ಗೆ ಮಾತುಕತೆ ನಡೆಸಿದ್ದರು.

ಸ್ವಾಮಿ ವಿವೇಕಾನಂದರು ಮೈಸೂರಿನ ನಾರಾಯಣ ಶಾಸ್ತ್ರೀ ರಸ್ತೆಯಲ್ಲಿರುವ 'ನಿರಂಜನ ಮಠ' ಎಂಬ ಸ್ಥಳದಲ್ಲಿ ವಾಸ್ತವ್ಯವನ್ನು ಹೂಡಿ, ಸಮೀಪದ ಸದ್ವಿದ್ಯಾ ಪಾಠಶಾಲೆಯಲ್ಲಿ ಪ್ರವಚನಗಳನ್ನು ಮಾಡಿದ್ದರು. ಈ ಪ್ರವಚನಗಳನ್ನು ಅವರು ಸಂಸ್ಕೃತ ಭಾಷೆಯಲ್ಲಿ ನೀಡಿದ್ದರೆಂದು ನಂಬಲಾಗಿದೆ.

ನಿರಂಜನ ಮಠವು ಈಗ ಅತೀವ ಶಿಥಿಲಾವಸ್ಥೆಯಲ್ಲಿದ್ದು, ಅದನ್ನು ಒಂದು ಸ್ಮಾರಕವನ್ನಾಗಿ ಅಭಿವೃದ್ಧಿ ಪಡಿಸುವ ಕಾರ್ಯ ಅತ್ಯಂತ ತುರ್ತಾಗಿ ನಡೆಯಬೇಕಾಗಿದೆ. ಅದಕ್ಕಾಗಿ, ಒಂದು ಟ್ರಸ್ಟ್ ಅನ್ನು ಸ್ಥಾಪಿಸಲಾಗಿದೆ. ಈ ಟ್ರಸ್ಟ್‌ನಲ್ಲಿ ಮೈಸೂರಿನ ಸಂಸತ್ ಸದಸ್ಯರಾದ ಶ್ರೀ ವಿಜಯ ಶಂಕರ್ ಸೇರಿದಂತೆ ಅನೇಕ ಗಣ್ಯರು, ರಾಮಕೃಷ್ಣ ಆಶ್ರಮದ ಭಕ್ತರು ಇದ್ದಾರೆ.

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಇತ್ತೀಚಿಗೆ ಮೈಸೂರು ರಾಮಕೃಷ್ಣ ಆಶ್ರಮದ ಅಂಗಸಂಸ್ಥೆಯಾದ ಶ್ರೀರಾಮಕೃಷ್ಣ ವಿದ್ಯಾಶಾಲೆಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ನಿರಂಜನ ಮಠವನ್ನು ಸ್ವಾಮಿ ವಿವೇಕಾನಂದರ ಒಂದು ಭವ್ಯ ಸ್ಮಾರಕವನ್ನಾಗಿ ಅಭಿವೃದ್ಧಿ ಪಡಿಸಲು ಐದು ಕೋಟಿ ರೂಪಾಯಿಗಳನ್ನು ಅನುದಾನವನ್ನಾಗಿ ಆಯವ್ಯಯ ಪತ್ರದಲ್ಲಿ ತೆಗೆದಿರಿಸುವುದಾಗಿ ಘೋಷಿಸಿದರು. ಇದರಿಂದಾಗಿ ಮೈಸೂರಿನ ಮಹಾಜನರ ಬಹುಕಾಲದ ಕನಸು ನನಸಾಗುವ ಸುಸಂದರ್ಭ ಒದಗಿ ಬಂದಂತಾಗಿದೆ.



ಈ ಸ್ಮಾರಕ ಭವನದ ಮೊದಲ ಮಹಡಿಯಲ್ಲಿ ಗ್ರಂಥಾಲಯ ಮತ್ತು ಸಾಂಸ್ಕೃತಿಕ ಕೇಂದ್ರಗಳಿರುತ್ತವೆ. ಎರಡನೆಯ ಮಹಡಿಯಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಶಿಕ್ಷಣವನ್ನು ನೀಡುವ ತರಗತಿಗಳನ್ನು ನಡೆಸುವ ಯೋಜನೆ ಇದೆ. ಈ ಮಹಾನ್ ಯೋಜನೆಯು ಶೀಘ್ರವಾಗಿ ಸುಸಂಪನ್ನಗೊಳ್ಳಲಿ ಎಂಬುದೇ ನಮ್ಮೆಲ್ಲರ ಹಾರೈಕೆ. ✪

### ಮದುರೈ ಶಾರದಾ ವಿದ್ಯಾಲಯದ ರಜತ ಮಹೋತ್ಸವ



**ಮ**ದುರೈ ರಾಮಕೃಷ್ಣ ಮಠವು ಶಾರದಾ ವಿದ್ಯಾಲಯ ಎಂಬ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದೆ. ಅದರ ರಜತ ಮಹೋತ್ಸವವನ್ನು ಜುಲೈ ೧೨, ೨೦೦೮ ರಂದು ವಿಜೃಂಭಣೆಯಿಂದ ಆಚರಿಸಲಾಯಿತು. ಡಾ. ಷಣ್ಮುಗಂ ಮತ್ತು ಶ್ರೀ ಅರ್ಧನಾರಿ ಎಂಬ ಇಬ್ಬರು ಭಕ್ತರು ೧೯೮೩ ರಲ್ಲಿ ಆರಂಭಿಸಿದ ಈ ಶಾಲೆಯಲ್ಲಿ ಸದ್ಯ ೫೮೦ ಮಕ್ಕಳು ಓದುತ್ತಿದ್ದಾರೆ.

ಜುಲೈ ೧೨ ರ ಬೆಳಗ್ಗೆ ಮಠದ ಆವರಣದಲ್ಲಿ ಚೆನ್ನೈ ನಗರದ ಪ್ರಸಿದ್ಧ ಉದ್ಯಮಿ ಶ್ರೀ ಕುಪ್ಪುಸ್ವಾಮಿ ಚೆಟ್ಟಿ ಅವರು ಸ್ವಾಮಿ ವಿವೇಕಾನಂದರ ಭವ್ಯ ಮೂರ್ತಿಯನ್ನು ಅನಾವರಣ ಮಾಡಿದರು. ನಂತರ ಶ್ರೀಲಂಕಾದ ರಾಮಕೃಷ್ಣ ಮಿಷನ್ ಮುಖ್ಯಸ್ಥರಾದ ಸ್ವಾಮಿ ಸರ್ವರೂಪಾನಂದಜಿ ಅವರು ಮೂರ್ತಿಗೆ ಆರತಿ ಮಾಡಿದರು.

ಮಧ್ಯಾಹ್ನ ೩.೩೦ಕ್ಕೆ ನಡೆದ ಸಮಾರಂಭದಲ್ಲಿ ಅನೇಕ ಹೆಸರಾಂತ ಭಾಷಣಕಾರರು ವಿದ್ಯಾಲಯದ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಇದೇ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಕಡೆಯಲ್ಲಿ ಮದುರೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಕಮಲಾತ್ಮಾನಂದಜಿ ಅವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಬೆಳಗ್ಗೆ ೧೫೦೦ ಭಕ್ತರು ಮತ್ತು ಸಂಜೆಯ ಸಮಾವೇಶದಲ್ಲಿ ೩೫೦೦ ಭಕ್ತರು ಪಾಲ್ಗೊಂಡಿದ್ದರು. ✪

Managing Editor : *Swami Nityasthananda* Editor : *Swami Vireshananda*

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.